ಮರಗಳ ಕಥೆ

# ಗೆದ್ದಲು ಹಿಡಿಯದ ಗೊದ್ದಲ ಮರ



**ಮರ ಕಡಿದು ನೂರಾರು ವರ್ಷಗಳು ಕಳೆದರೂ ಹಸಿಯಾಗಿಯೇ ಇರುವುದು ಗೊದ್ದಲ ಮರದ ವಿಶೇಷ. ಈ ಮರಕ್ಕೆ ಎಂದಿಗೂ ಗೆದ್ದಲು ಹಿಡಿಯದು. ಗೊದ್ದಲ ಮರ ಬೆಳೆಸಲು ಈ ವಿಶಿಷ್ಟ ಗುಣವೊಂದು ನೆಪವಾಗಬಾರದೇಕೆ?**

■ ವಿನು ಗಂಗೆ

ಒಂದು ಹೂವನ್ನು ಗಿಡದಿಂದ ಕಿತ್ತ ನಂತರ ಬಿಸಿಲಲ್ಲಿ ಇರಿಸಿದರೆ ಅದು ಎಷ್ಟು ಕಾಲ ತೇವಾಂಶ ಹಿಡಿದುಕೊಂಡಿರಬಲ್ಲದು? ಹೆಚ್ಚೆಂದರೆ ಮೂರ್ನಾಲ್ಕು ದಿನ. ಹಾಗೆಯೇ ಹಣ್ಣು ಕಿತ್ತು ಹೊರ ಕವಚ ತೆಗೆದು ಒಣಗಿಸಿದರೆ ಸುಮಾರು ಒಂದು ತಿಂಗಳು ತೇವಾಂಶ ಇರಬಹುದು. ಅದೇ ಒಂದು ಮರವನ್ನು ಕತ್ತರಿಸಿ ಹೊರಭಾಗ ತೆಗೆದು ನಾಟಾ ಒಣಗಿಸಿದರೆ?

ನಿಮ್ಮ ಊಹೆ ಸರಿ. ಸುಮಾರು ಆರು ತಿಂಗಳಿನಿಂದ ಒಂದು ವರ್ಷದ ಕಾಲ ಅದರಲ್ಲಿ ಹಸಿ ಅಂಶ ಇರುತ್ತದೆ. ಈಗ ನಾನು ಹೇಳಹೊರಟ ಮರ ಇದಾವ ಪರಿಮಿತಿಯ ಒಳಗೂ ಬರುವುದಿಲ್ಲ ಎಂದರೆ ನಂಬುವಿರಾ? ಅದು ಗೊದ್ದಲ ಮರ. ಇತ್ತೀಚೆಗೆ ನಮ್ಮ ತೋಟ ಕಾಯುವ ಲೋಕೇಶ ಹಾಗೇ ಮಾತಾಡುತ್ತಾ 'ಮನುಷ್ಯನ ಒಂದು ಜನ್ಮ ಮುಗಿದು ಇನ್ನೊಂದು ಜನ್ಮ ಬಂದರೂ ಒಣಗದ ಮರ ಎಂದರೆ ಗೊದ್ದಲ ಮರ' ಎಂದನು.

ಇದು ಗ್ರಾಮೀಣ ಭಾಗದ ಮತ್ತೊಂದು ಉತ್ಪ್ರೇಕ್ಷೆ ಮಾತು ಎಂದುಕೊಂಡು 'ಓಹೋ, ಗೊದ್ದಲ ಮರ ಅಷ್ಟು ವರ್ಷ ಬದುಕುತ್ತದೆಯಾ?' ಎಂದೆ. ಅದಕ್ಕವನು 'ಇಲ್ಲಕ್ಕ, ಮರದ ನಾಟಾ ಎಷ್ಟು ವರ್ಷವಾದರೂ ಹಸಿಯಾಗಿಯೇ ಇರುತ್ತದೆ. ಎಂದಿಗೂ ಒಣಗುವುದೇ ಇಲ್ಲ' ಎಂದನು. ಕತ್ತರಿಸಿದ ನಾಟಾ ಒಣಗದೇ ಇರಲು ಹೇಗೆ ಸಾಧ್ಯ? ಎಂದು ನಾನು, 'ಎಲ್ಲಿ? ತೋರಿಸು ನೋಡೋಣ' ಎಂದೆ. ಆಗವನು 'ಇಲ್ಲಕ್ಕ, ಇಲ್ಲಿ ಗೊದ್ದಲ ಮರಗಳು ಇದ್ದಾವೆ. ಆದರೆ ಅದರ ನಾಟಾ ಯಾವುದು ಅಂತ ನನಗೆ ಗುರುತಿಸಲು ಬರಲ್ಲ. ನಮ್ಮ ಅಪ್ಪ, ಅಜ್ಜ ಇದನ್ನು ನನಗೆ ಹೇಳಿದ್ದರು' ಎಂದ.

ಗೊದ್ದಲ ಮರ ನನ್ನ ತಲೆಯೊಳಗೆ ಕೊರೆಯಲು ಶುರು ಮಾಡಿತ್ತು. ನಾಟಾದ ಜಾಡು ಅರಸಲು ಶುರು ಮಾಡಿದೆ. ಗೊದ್ದಲ ಮರದ ಈ ಗುಣದ ಬಗ್ಗೆ ಏನೇನೂ ತಿಳಿಯದೇ, ಕೇವಲ ಹೆಸರೊಂದೇ ತಿಳಿದಿದ್ದಾಗ ನಮ್ಮ ಪಕ್ಕದ ಊರಿನ ಪರಸುವಿನ ಸಹಾಯದಿಂದ ಕಾಡಲ್ಲಿ ಹುಟ್ಟಿದ ಎರಡು ಗೊದ್ದಲ ಸಸಿಗಳನ್ನು ತರಿಸಿ ನಮ್ಮ ತೋಟದಲ್ಲಿ ಹಾಕಿಸಿದ್ದೆ. ಈಗ ಹೊಸದಾಗಿ ಮೂಡಿಬಂದ ವಿಶೇಷ ಕಾಳಜಿಯಿಂದ ಅವುಗಳನ್ನು ನೋಡಲು ಹೋದೆ. ಅತ್ತ ಕಡೆಯಿಂದ ನಮ್ಮ ಮಂಜ ಚಿಕ್ಕಪ್ಪ ಬರುವುದು ಕಂಡಿತು. ನಮ್ಮ ಊರಿನ ಹಿರಿ ತಲೆಗಳಲ್ಲಿ ಇವರೂ ಒಬ್ಬರು. ಅವರನ್ನು ಕಂಡ ತಕ್ಷಣ ನನ್ನ ತಲೆ ಕೊರೆಯುತ್ತಿದ್ದ ಪ್ರಶ್ನೆಗೆ ಇವರಲ್ಲಿ ಉತ್ತರ ಸಿಗಬಹುದು ಎನಿಸಿ ಚಿಕ್ಕಪ್ಪನನ್ನು ಕೇಳಿದೆ.

ಅದಕ್ಕವರು 'ಹೌದು' ಎಂದರು. ಮಂಜ ಚಿಕ್ಕಪ್ಪ ಉತ್ಪ್ರೇಕ್ಷೆ ಮಾಡುವವರಲ್ಲ. ಹೆಚ್ಚೇನೂ ಓದಿರದಿದ್ದರೂ ಬಹುತೇಕ ಎಲ್ಲಾ ಬಗೆಯ ನಾಟಾ ಗುರುತಿಸಬಲ್ಲ ಪರಿಣತರು. ಬಹುಶಃ ಈ ತಲೆಮಾರು ಕಳೆದರೆ ಇಂತಹ ಅನೇಕ ಅಮೂಲ್ಯ ಮಾಹಿತಿಯನ್ನು ನಾವು ಕಳೆದುಕೊಳ್ಳುತ್ತೇವೆ. ಆದರೂ, ಹೇಗೆ ಸಾಧ್ಯ? ಎಂದು ಕೇಳಿದೆ. 'ಈಗ ಕತ್ತಲಾಗಿದೆ. ನಾಳೆ ಬೆಳಿಗ್ಗೆ ನಮ್ಮ ಕೊಟ್ಟಿಗೆಗೆ ಬಾ, ತೋರಿಸುತ್ತೇನೆ' ಎಂದು ಹೇಳಿ ಹೋದರು.

ಬೆಳಿಗ್ಗೆ ಮಗಳನ್ನು ಎಬ್ಬಿಸಿಕೊಂಡು ಹೊರಟೆ. ಒರೆ ಹಚ್ಚಿ ನೋಡುವ ನನ್ನ ಸ್ವಭಾವ ತಿಳಿದ ಚಿಕ್ಕಪ್ಪ ಕಂದ್ಲಿ (ಮಚ್ಚು) ಹಿಡಿದು ಕೊಟ್ಟಿಗೆ ಮುಂದೆ ಕಾದಿದ್ದರು. ಕೊಟ್ಟಿಗೆಗೆ ಹಾಕಿದ ಕಂಬಗಳನ್ನು ಒಂದೊಂದಾಗಿ 'ನೋಡು ತಂಗೀ, ಇದು ಜಂಬೆಯದ್ದು, ಇದು ನೇರಲಿನದ್ದು, ನೀಲಗಿರಿಯದ್ದು' ಎಂದು ಗುರುತಿಸಿ ಹೇಳುತ್ತಾ 'ಇದೇ ನೋಡು, ಗೊದ್ದಲದ್ದು' ಎಂದು ಕಂಬವೊಂದನ್ನು ತೋರಿದರು. 'ಇದು ನಮ್ಮ ಅಪ್ಪನ ಕಾಲದಲ್ಲಿ ಕಾಡಿನಲ್ಲಿ ಮುರಿದು ಬಿದ್ದಿದ್ದ ಮರ' ಎಂದು ಹೇಳುತ್ತಾ ಆ ಕಂಬವನ್ನು ಕಂದ್ಲಿಯಿಂದ ಸ್ವಲ್ಪವೇ ಕೆತ್ತಿದರು.



ನಿಜಕ್ಕೂ ಅದೊಂದು ಅದ್ಭುತ. ಐವತ್ತು ವರ್ಷಕ್ಕೂ ಹೆಚ್ಚು ಕಾಲದಿಂದ ಕೊಟ್ಟಿಗೆಯ ಕಂಬವಾಗಿ ನಿಂತಿದ್ದ ಒಂದೆರಡು ಮಿಲಿ ಮೀಟರ್ ಒಳಗೆ ಹಸಿ! ನಾನು ದಂಗಾಗಿ ಹೋದೆ.

ನಮ್ಮ ಕೈ ಕಾಲಿಗೆ ಮರವನ್ನು ಹೋಲಿಸುವುದಾದರೆ ಚರ್ಮವನ್ನು ತೊಗಟೆ, ಮಾಂಸ ಖಂಡದ ಪದರವನ್ನು ಬಿಳಿ ಮರ, ಗಟ್ಟಿ ಭಾಗ ಮೂಳೆಯನ್ನು ಕೆಚ್ಚು ಎಂದುಕೊಳ್ಳಬಹುದು. ಅಂತಹ ಕೆಚ್ಚು ಗೊದ್ದಲ ಮರ ಕಡಿದ ನೂರಾರು ವರ್ಷಗಳ ಕಾಲ ಹಸಿಯಾಗಿಯೇ ಇರುವುದು ವಿಜ್ಞಾನಕ್ಕೆ ಸವಾಲೇ ಸರಿ. ಈ ಹಸಿ ಅಂಶ ಇರುವ ಕಾರಣಕ್ಕೆ ಹದಗೊಳಿಸುವಿಕೆ (timber treatment) ಇಲ್ಲದೆಯೂ ಈ ಮರಕ್ಕೆ ಎಂದಿಗೂ ಗೆದ್ದಲು ಹಿಡಿಯದು. ಹಾಗಾಗಿ ಮುಂಬಾಗಿಲಿನ ಚೌಕಟ್ಟು ಹಾಗೂ ಹೊಸ್ತಿಲಿಗೆ ಈ ಮರವನ್ನು ಬಳಸುತ್ತಾರೆ.

ಒಂದು ವೇಳೆ ಬೇರೆ ಮರವನ್ನು ಬಳಸಿದರೂ ಹೊಸ್ತಿಲ ಕೆಳಗೆ ಈ ಮರದ ಒಂದು ತುಂಡನ್ನಾದರೂ ಹಿಂದೆ ಇಡುತ್ತಿದ್ದರಂತೆ. ಯಾವ ದುಷ್ಟಶಕ್ತಿಯೂ ಇದನ್ನು ದಾಟಿ ಬರುವುದಿಲ್ಲ ಎಂಬುದು ನಂಬಿಕೆ. ಗೆದ್ದಲು ಪ್ರತಿರೋಧ ಇರುವ ಕಾರಣಕ್ಕೆ ಗೆದ್ದಲು ಹೋಗಿ ಗೊದ್ದಲ ಹೆಸರಾಗಿರಬಹುದು.

ಸಸ್ಯಶಾಸ್ತ್ರಜ್ಞ ಸಂಪತ್ ಕುಮಾರ್ ಅವರನ್ನು ಕೇಳಲಾಗಿ ಇದರ ವೈಜ್ಞಾನಿಕ ಹೆಸರು Lannea coromandelica ಎನ್ನುವುದು ತಿಳಿದು ತಾಳೆಯಾಯಿತು. ಅಂತರ್ಜಾಲ ತಡಕಾಡಿದಾಗ ಇದರ ಉತ್ಕೃಷ್ಟ ಗೆದ್ದಲು ಪ್ರತಿರೋಧಕ ಗುಣದ ಜೊತೆಗೆ ಇದರಿಂದ ಅಂಟು ತೆಗೆಯುವುದಾಗಿ ತಿಳಿಯಿತು. ಸದ್ಯ ನಮ್ಮ ತೋಟದಲ್ಲಿ ಗೊದ್ದಲ ಮರ ಬೆಳೆಯುತ್ತಿರುವ ಖುಷಿಯಲ್ಲಿ ಅದರ ವಿಶಿಷ್ಟ ಗುಣಕ್ಕಾಗಿಯಾದರೂ ಈ ಮರವನ್ನು ಬೆಳೆಸುವತ್ತ ಎಲ್ಲರ ಚಿತ್ತ ಹರಿಯಲೆಂದುಕೊಂಡು ಇನ್ನೊಂದು ಮರದ ಕಡೆಗೆ ಕಣ್ಣು ಹಾಯಿಸುತ್ತೇನೆ.

ಪ್ರತಿಕ್ರಿಯಿಸಿ: feedback@sudha.co.in